ಶ್ರೀ ಜಿ. ಬಿ. ಶಂಕರ ರಾವ್.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೇಕಾದಷ್ಟು ಸೇತುವೆಗಳ ಕೆಲಸವನ್ನು ಮಾಡಿದೆ. ಈಗ ಪ್ರಾರಂಭಮಾಡಿರತಕ್ಕ ಸೇತುವೆಗಳದು 100ಕ್ಕೆ 60, 70ರಷ್ಟು ಕೆಲಸ ಆಗಿದೆ.

ಶ್ರೀಮತಿ ಬಿ. ಎರ್. ನುಬ್ಬಮ್ಮ.—ಮಲೆನಾಡು ಡೆವಲಪ್‌ಮೆಂಟ್ ಕೆಲಸಕ್ಕೆ ಸಂಬಂಧಪಟ್ಟ ಹಾಗೆ ಈ ವರ್ಷ ಪಬ್ಲಿಕ್‌ವರ್ಕ್ಸ್ ಇಲಾಖೆಯಿಂದ ಯಾವ ಹಣವನ್ನೂ ಕೊಡುವುದಿಲ್ಲ ಎಂದು ಸರ್ಕಾರದವರು ತಿಳಿಸುತ್ತಾ ಇರತಕ್ಕದ್ದು ನಿಜವೇ ?

ಶ್ರೀ ಜಿ. ಬಿ. ಶಂಕರ ರಾವ್.—ಹಣದ ಅಭಾವ ಇದೆ ಎಂದು ಹೇಳಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಚಿಕ್ಕಮಗಳೂರು ಜಿಲ್ಲೆಯಲ್ಲಿ 1961 ನೇ ಇಸವಿಯಲ್ಲಿ 23 ಸೇತುವೆಗಳ ಕೆಲಸವನ್ನು ಪ್ರಾರಂಭಮಾಡಿ ಅವುಗಳನ್ನು ಪೂರ್ತಿಮಾಡದೆ ಅರ್ಧಮರ್ಧಮಾಡಿ ಹಾಗೆಯೇ ನಿಲ್ಲಿಸಲಾಗಿದೆ, ಅವುಗಳನ್ನು ಹಣ ಬಂದಾಗ ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಆ ರೀತಿ ಆರಂಭವಾದ ಸೇತುವೆಗಳ ಕೆಲಸವನ್ನು ನಿಲ್ಲಿಸುವುದಕ್ಕೆ ಬಲವಾದ ಕಾರಣವೇನು, ಅದಕ್ಕೆ ಮಂಜೂರಾದ ಹಣವನ್ನು ಬೇರೆ ಯಾವುದಕ್ಕಾದರೂ ಉಪಯೋಗಿಸಿಕೊಂಡರೇ, ಹೇಗೆ ? ಅದು ಮಲೆನಾಡು ಪ್ರದೇಶವಾಗಿರುವುದರಿಂದ ಅಲ್ಲಿ ಸೇತುವೆಗಳು ಇಲ್ಲದೆ ಹೋದರೆ ಅಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡುವುದು ಕಷ್ಟ, ಆ ರೀತಿ ಪ್ರಾರಂಭಮಾಡಿದ್ದ ಸೇತುವೆಗಳ ಕೆಲಸವನ್ನು ನಿಲ್ಲಿಸುವುದಕ್ಕೆ ಏನಾದರೂ ರಾಜಕೀಯ ಕಾರಣ ಇದೆಯೇ. ಹಣ ಇಲ್ಲದೆ ಆ ಕಾರ್ಯವನ್ನು ನಿಲ್ಲಿಸಲಾಗಿದೆಯೇ ಅಥವಾ ಇನ್ನು ಯಾವುದಾದರೂ ಕಾರಣ ಇದೆಯೇ ? ಈಗ ಈ ರಾಜ್ಯದಲ್ಲಿ ಬೇರೆಯಾವ ಸೇತುವೆಗಳ ಕೆಲಸವನ್ನೂ ಪ್ರಾರಂಭ ಮಾಡಿಲ್ಲವೇ ?

ಶ್ರೀ ವೀರೇಂದ್ರಪಾಟೀಲ್.—ಇದರಲ್ಲಿ ನಾನ್ ಪಿ. ಡಬ್ಲ್ಯು. ಡಿ. ರೋಡುಗಳು ಏನಿವೆಯೋ ಅವುಗಳಿಗೆ ಬಜೆಟ್ಟಿನಲ್ಲಿ ಲಂಪ್‌ಸಮ್ ಆಗಿ ಹಣವನ್ನು ಒದಗಿಸಿರುತ್ತದೆ. ಆ ಹಣವನ್ನು ಚೀಫ್ ಇಂಜಿನಿಯರು ಸೂಪರಿಂಟೆಂಡೆಂಟ್ ಇಂಜಿನಿಯರುಗಳು ಇರುವ ಸರ್ಕಲ್‌ಗಳಿಗೆ ಹಂಚುತ್ತಾರೆ. ಅವರು ಅದನ್ನು ಡಿವಿಜನ್‌ಗಳಿಗೆ ಪ್ರಪೋರ್ಷನೇಟ್ ಆಗಿ ಹಂಚುತ್ತಾರೆ. ಇದರಲ್ಲಿ ಏನಾಗಿದೆ ಎಂದರೆ, ಆ ಕೆಲಸಕ್ಕೋಸ್ಕರ ಲಂಪ್‌ಸಮ್ ಪ್ರಾವಿಜನ್‌ನಲ್ಲಿ ಎಷ್ಟು ಹಣವನ್ನು ಒದಗಿಸಿದ್ದರೋ ಅಷ್ಟು ಹಣದಲ್ಲೇ ಆ ಕೆಲಸವನ್ನು ಮುಗಿಸಬೇಕಾಗಿತ್ತು. ಆದರೆ ಇಂಜಿನಿಯರು ಕೆಲವು ಒತ್ತಾಯಗಳಿಂದ ಕೆಲವು ಕಡೆ ಜಾಸ್ತಿ ಹಣವನ್ನು ಖರ್ಚುಮಾಡಿ ಆ ಕೆಲಸಗಳನ್ನು ಮಾಡಿಸಿದ್ದಾರೆ. ಆದ್ದರಿಂದ ಕೆಲವುಕಡೆ ನಾನ್ ಪಿ. ಡಬ್ಲ್ಯು. ಡಿ. ರೋಡುಗಳ ಕೆಲಸವನ್ನು ಮಾಡುವುದಕ್ಕೆ ಹಣ ಇಲ್ಲ. ಆದ್ದರಿಂದ ನಾರ್ಮಲ್ ಬಜೆಟ್ಟಿನಲ್ಲಲ್ಲಿಯೇ ಅದಕ್ಕೆ ಸಾಧ್ಯವಿದ್ದಷ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಮೊದಲು ಹಿಂದೆ ಪ್ರಾರಂಭಮಾಡಿದಂತಹ ಕೆಲಸಗಳಿಗೆ ಬಜೆಟ್ಟಿನಲ್ಲಿ ಪ್ರತ್ಯೇಕವಾದ ಪ್ರಾವಿಜನ್ ಇರುತ್ತಿತ್ತು. ಈಗೆ ಆದು ಇಲ್ಲ. ಅದರ ನಲುವಾಗಿ ನಾರ್ಮಲ್ ಬಜೆಟ್ಟಿನಲ್ಲಿಯೇ ಆ ಕೆಲಸಕ್ಕೆ ಹಣವನ್ನು ಖರ್ಚು ಮಾಡಿ ಅದನ್ನು ಆದಷ್ಟು ತೀವ್ರವಾಗಿ ಮಾಡಿಕೊಡುತ್ತೇವೆ.

Equation of Peshkars to Sheristedars in Gulbarga Division.

*Q.—179. Sri S. RUDRAPPA (Kalgi).—

Will the Government be pleased to state :—

(*a*) the number of Peshkars in Gulbarga Division who have been equted with the post of Sheristedars ;

(*b*) the additional amount of expenditure involved due to the above equation ?

A.—Sri M. V. KRISHNAPPA (Minister for Revenue).—

(*a*) Sixty-three posts of Peshkars have been equated with the posts of Taluk Sheristedars in G. O. No. RD 241 ENG 64, dated 10th December 1964.

(*b*) About Rs. 31,000 per annum.

ಶ್ರೀ ಎಸ್. ರುದ್ರಪ್ಪ.—ಸ್ವಾಮಿ, ಪೇಷ್ಕಾರರುಗಳ ಕೆಲಸ ಮತ್ತು ಜವಾಬ್ದಾರಿಗಳಿಗೂ ಶಿರಸ್ತೇದಾರರುಗಳ ಕೆಲಸ ಮತ್ತು ಜವಾಬ್ದಾರಿಗಳಿಗೂ ಏನಾದರೂ ವ್ಯತ್ಯಾಸ ಇದೆಯೇ ?

† ಶ್ರೀ ಎಂ. ವಿ. ಕೃಷ್ಣಪ್ಪ.—ಹೈದರಾಬಾದ್ ಕರ್ನಾಟಕದಲ್ಲಿ ಪೇಷ್ಕಾರರುಗಳು ಏನು ಕೆಲಸ ವನ್ನು ನಿರ್ವಹಿಸುತ್ತಿದ್ದಾರೆಯೋ ಆ ಕೆಲಸವನ್ನು ಮೈಸೂರಿನಲ್ಲಿ ಶಿರಸ್ತೇದಾರರು ನಿರ್ವಹಿಸುತ್ತಿದ್ದಾರೆ. ಆದರೆ ಅವರನ್ನು ಹಿಂದಿನಿಂದಲೂ ಶಿರಸ್ತೇದಾರರುಗಳ ಹುದ್ದೆಗೆ ಈಕ್ಸೇಟ್ ಮಾಡಿರಲಿಲ್ಲ. ಅದು ಅನ್ಯಾಯ ಎಂದು ಸರ್ಕಾರದವರು ಅವರ ಕೆಲಸ ಮತ್ತು ಜವಾಬ್ದಾರಿಗಳನ್ನು ಗಣನೆಗೆ ತೆಗೆದು ಕೊಂಡು ಹೋದವರ್ಷ ಒಂದು ಆಜ್ಞೆಯನ್ನು ಹೊರಡಿಸಿ ಅವರನ್ನು ತಾಲ್ಲೂಕು ಶಿರಸ್ತೇದಾರರ ಹುದ್ದೆಗೆ ಈಕ್ಸೇಟ್ ಮಾಡಿದ್ದೇವೆ.

Sri GANJI VEERAPPA.—May I know whether the seniority or promotion of these revenue officers like Sheristedars is considered on Division-wise basis or State-wide basis ?

Sri M. V. KRISHNAPPA.—Upto now it is done on Division-wise basis.

Repair or Restoration of Tanks in North Kanara District.

*Q.—193. Sri S. P. PHAYADE (Ankola).—

Will the Government be pleased to state :—

(*a*) the number of tanks in (1) Yellapur, (2) Mundgod, (3) Haliyal and (4) Ankola Taluk in North Kanara District ;

(*b*) the number of tanks in the said taluks that have not been restored or repaired for over 10 year ;

(*c*) the action taken to restore or repair those tanks ?

A.—Sri ALUR HANUMANTHAPPA (Deputy Minister for Minor Irrigation).—

		No. of Tanks, including Katcha bunds.
(*a*)	Taluk	
	(1) Yellapur	769
	(2) Mundgod	372
	(3) Haliyal	531
	(4) Ankola	166
(*b*)	(1) Yellapur	760
	(2) Mundgod	365
	(3) Haliyal	521
	(4) Ankola	163.

(*c*) Action is being taken to repair or restore the tanks consistent with the availabilty of funds.

ಶ್ರೀ ಎಸ್. ಪಿ. ಫಾಯಡೆ.—(ಎ) ಮತ್ತು (ಬಿ)ಗೆ ಕೊಟ್ಟಿರುವ ಉತ್ತರ ಹೋಲಿಸಿ ನೋಡಿದರೆ, ಈ 10 ವರ್ಷದಲ್ಲಿ ಎರಾ್ಲಪುರದಲ್ಲಿ ಒಭಂತ್ತು, ಮುಂಡಗೋಡಿನಲ್ಲಿ ಏಳು, ಹಲಯಾಲನಲ್ಲಿ 10, ಅಂಕೋಲಾದಲ್ಲಿ ಮೂರು—ಈ ರೀತಿ ಕೆರೆಗಳ ಕೆಲಸ ಮಾಡಿದ್ದೀರಿ. ಇಷ್ಟು ಕಮ್ಮಿ ಸಂಖ್ಯೆಯಲ್ಲಿ ಕೆರೆ ಕೆಲಸಗಳನ್ನು ತೆಗೆದುಕೊಂಡಿರುವುದಕ್ಕೆ ಕಾರಣವೇನು ?